(ಸಾಕ್ಷಿದಾರರನ್ನು ಇಂದುಃ 01-04-2021 ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಮುಂದುವರೆದ ಮುಖ್ಯವಿಚಾರಣೆ ಃ- ಶ್ರೀ ಎ.ಪಿ.ಪಿ. ರವರಿಂದ ಃ-**

ಸಾಕ್ಷಿ ನ್ಯಾಯಾಲಯದ ಮುಂದಿರುವ ಕೆಂಪು ಮತ್ತು ನೀಲಿ ಬಣ್ಣದ ಓಢ್ನಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಆರೋಪಿತರ ಪರ ಶ್ರೀ ಎಸ್.ಎನ್.ಬಿ. ರವರಿಂದ ಃ-**

ನಾನು ಎಂ.ಎಸ್.ಡಬ್ಲ್ಯು.ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆ ತಾಯಿಗೆ ಇಬ್ಬರು ಗಂಡು, ಇಬ್ಬರು ಹೆಣ್ಣುಮಕ್ಕಳು ಇದ್ದೇವೆ. 1ನೇ ಆರೋಪಿ ತನ್ನ ತಂದೆ ತಾಯಿಗೆ ಒಬ್ಬನೇ ಮಗನಾಗಿದ್ದಾನೆ. 1ನೇ ಆರೋಪಿಯ ತಂದೆ ನನ್ನ ಮದುವೆಯ ಪೂರ್ವದಲ್ಲಿ ತೀರಿಕೊಂಡಿದ್ದಾರೆ. ನನ್ನ ಗಂಡನಾದ 1ನೇ ಆರೋಪಿಗೆ ಆತನ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಇದೆ ಎಂದರೆ ಸರಿ. ನನ್ನ ಅತ್ತೆಗೆ ನನ್ನ ಗಂಡ ಒಬ್ಬನೇ ಆಸರೆ ಎಂದರೆ ಸರಿ. ಮದುವೆಯ ಸಮಯದಲ್ಲಿ ನೀಡಿರುವ ಬಂಗಾರವನ್ನು ಸೇಡಂನ ಶ್ರೀನಿವಾಸ ಅಂಗಡಿಯಲ್ಲಿ ಖರೀದಿ ಮಾಡಿದ್ದೇವೆ. ಬಂಗಾರ ಖರೀದಿ ಮಾಡಿದ ಸಂದರ್ಭದಲ್ಲಿ ಬಿಲ್ ಕೊಟ್ಟಿದ್ದಾರೆ. ಬಂಗಾರ ಖರೀದಿ ಮಾಡಿದ ಬಗ್ಗೆ ಬಿಲ್‌ನ್ನು ಪೋಲೀಸರಿಗೆ ಕೊಟ್ಟಿರುವುದಿಲ್ಲ, ಮದುವೆಯ ಸಮಯದಲ್ಲಿ ನೀಡಿರುವ ಸಾಮಾನುಗಳನ್ನು ಸೇಡಂನಲ್ಲಿ ಖರೀದಿ ಮಾಡಿದ್ದೇವೆ, ಆದರೆ ಅಂಗಡಿಯ ಹೆಸರು ನನಗೆ ಗೊತ್ತಿಲ್ಲ, ಗೃಹ ಬಳಕೆಯ ಸಾಮಾನುಗಳನ್ನು ಖರೀದಿ ಮಾಡಿರುವ ಸಂದರ್ಭದಲ್ಲಿ ಬಿಲ್‌ಗಳನ್ನು ಕೊಡುತ್ತಾರೆ ಎಂದರೆ ಸರಿ. ಸಾಮಾನುಗಳನ್ನು ಖರೀದಿ ಮಾಡಿದ ಬಗ್ಗೆ ಬಿಲ್‌ಗಳನ್ನು ನಾನು ಹಾಜರುಮಾಡಿರುವುದಿಲ್ಲ,

ನನ್ನ ತಂದೆ ಯಾವುದೇ ಕೆಲಸ ಮಾಡುವುದಿಲ್ಲ, ಮದುವೆಯ ಸಮಯದಲ್ಲಿ ಬಂಗಾರ ಮತ್ತು ಸಾಮಾನುಗಳನ್ನು ತರಲು ಹಾಗೂ 2 ಲಕ್ಷ ಹಣ ಕೊಡಲು ನನ್ನ ತಂದೆ ಸಾಲ ಮಾಡಿದ್ದಾರೆ. ಸಾಲ ಕೊಡುವ ಸಮಯದಲ್ಲಿ ದಾಖಲೆ ಬರೆಯಿಸಿಕೊಂಡು ಸಾಲ ಕೊಡುತ್ತಾರೆ ಎಂದರೆ ಸರಿ. ನನ್ನ ತಂದೆ ಯಾರ ಬಳಿ ಸಾಲ ತಂದಿದ್ದಾರೆಂದು ನನಗೆ ಗೊತ್ತಿಲ್ಲ, ವರದಕ್ಷಿಣೆ ಕೊಡುವುದು ತಪ್ಪು ಎಂದರೆ ಸರಿ. ನನ್ನ ತಂದೆ ಯಾರ ಬಳಿ ಸಾಲ ತಂದಿದ್ದಾರೆ ಎಂದು ತೋರಿಸಲು ದಾಖಲೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ತನ್ನ ಸ್ನೇಹಿತರ ಬಳಿ ತಂದಿದ್ದಾರೆ ಎಂದಿದ್ದಾರೆ. ನನ್ನ ತಂದೆ ಯಾವ ಸ್ನೇಹಿತರ ಬಳಿ ಸಾಲ ತಂದಿದ್ದಾರೆ ಎಂದು ನನಗೆ ಗೊತ್ತಿಲ್ಲ, ನಾನು ಮತ್ತು ನನ್ನ ತಂದೆ 1ನೇ ಆರೋಪಿಗೆ ಹಣ, ಬಂಗಾರ

ಮತ್ತು ಗೃಹ ಬಳಕೆಯ ವಸ್ತುಗಳನ್ನು ಕೊಟ್ಟಿಲ್ಲದೇ ಇದ್ದರೂ ಸಹ ಸುಳ್ಳು ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ, ನನ್ನ ಗಂಡ ನಾನು ಬಡವಳಾಗಿರುವುದರಿಂದ ತನ್ನ ತಾಯಿಗೆ ನೋಡಿಕೊಳ್ಳುತ್ತಾಳೆ ಎಂದು ನನ್ನನ್ನು ಮದುವೆ ಆಗಿದ್ದಾನೆ ಎಂದರೆ ಸರಿಯಲ್ಲ, ನಾನು 1ನೇ ಆರೋಪಿಗೆ ನಿನ್ನ ತಾಯಿಯನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ಗಲಾಟೆ ಮಾಡಿ ನಾನು ಮನೆಯಿಂದ ಹೊರಗೆ ಬಂದಿದ್ದೇನೆ ಎಂದರೆ ಸರಿಯಲ್ಲ,

ನನಗೆ ಮತ್ತು ನನ್ನ ಅತ್ತೆಗೆ ಕಲಿಯಲಾರದೇ ಇದ್ದ ಕಾರಣ ನನಗೆ ಬೇರೆ ಮನೆ ಮಾಡಿ ಇಟ್ಟಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಎಲ್ಲರೂ ಒಟ್ಟಿಗೆ ಸೇಡಂನಲ್ಲಿದ್ದೆವು. ಸೇಡಂನಲ್ಲಿ ಒಂದು ವರ್ಷ ಉಳಿದಿದ್ದೆವು. ನನಗೆ ದಿನಾಂಕ 11-10-2017ರಂದು ಸಂಜೆ 05:00 ಗಂಟೆಗೆ ಪ್ರಜ್ಞೆ ಇರಲಿಲ್ಲ, ಮರುದಿನ ಸಂಜೆ ಸಮಯಕ್ಕೆ ನನಗೆ ಪ್ರಜ್ಞೆ ಬಂದಿರುತ್ತದೆ. ನನ್ನ ಗಂಡನ ಮನೆಯಿಂದ ತವರು ಮನೆ 6 ಕಿ.ಮೀ. ದೂರದಲ್ಲಿರುತ್ತದೆ. ನನ್ನ ತಂದೆತಾಯಿಗೆ ಅಂಬರೀಷ ಎಂಬುವವರು ಹೇಳಿದ್ದಾರೆ. ಅಂಬರೀಷ ನನ್ನ ಸಂಬಂಧಿಕರಾಗಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಗಂಡನ ಸಂಬಂಧಿಕರು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಎಷ್ಟು ಗಂಟೆಗೆ ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ, ನನ್ನನ್ನು ಸೇಡಂ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಎಷ್ಟು ಗಂಟೆಗೆ ಕರೆದುಕೊಂಡು ಹೋಗಿದ್ದಾರೆಂದು ನನಗೆ ಪ್ರಜ್ಞೆ ಇಲ್ಲದೇ ಇದ್ದರಿಂದ ಗೊತ್ತಾಗಿರುವುದಿಲ್ಲ, ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಆದರೆ ದೂರನ್ನು ಬರೆದುಕೊಟ್ಟಿದ್ದು ನನ್ನ ಅಣ್ಣ ತೆಗೆದುಕೊಂಡು ಹೋಗಿ ಕೊಟ್ಟಿದ್ದಾರೆ. ನಾನು ದೂರನ್ನು ಆಸ್ಪತ್ರೆಯಲ್ಲಿ ಬರೆದುಕೊಟ್ಟಿದ್ದೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೆ. ಸರಿ ಇದೆ

ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ